(ಈ) ಸರ್ಕಾರ ಚುನಾವಣಾ ಪ್ರಕ್ರಿಯೆಯನ್ನು ರದ್ದುಪಡಿಸಲು ಕ್ರಮ ಕೈಗೊಂಡಿರುವುದಿಲ್ಲ. ಇದು ಶಾಸನಬದ್ಧ ಪ್ರಕ್ರಿಯೆ ಆಗಿದ್ದು, ಪ್ರಕರಣವು ಸಹಕಾರ ಸಂಘಗಳ ನಿಬಂಧಕರ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ.

701 (465) **ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)** :–ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯ ಸರ್ಕಾರ ರೈತರಿಗೆ ಘೋಷಣೆ ಮಾಡಿರುವ ಅಸಲು ಮತ್ತು ಬಡ್ಡಿ ಮನ್ನಾ ಮಾಡಿರುವ ಮೊತ್ತವೆಷ್ಟು? ಹಾಗೂ ಯಾವ ಯಾವ ಸಹಕಾರಿ ಸಂಸ್ಥೆಗಳಿಂದ ಅಸಲು ಮತ್ತು ಬಡ್ಡಿ ಮನ್ನಾ ಮಾಡಲಾಗಿದೆ? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರ ರೈತರಿಗೆ ಘೋಷಣೆ ಮಾಡಿದ ಅಸಲು ಮತ್ತು ಬಡ್ಡಿ ಮನ್ನಾ ಮಾಡಿರುವ ಒಟ್ಟು ಮೊತ್ತದ ಹಣವನ್ನು ಯಾವ ಸಹಕಾರಿ ಸಂಸ್ಥೆಗಳಿಂದ ನೀಡಲಾಗಿದೆ? ನೀಡಿದ ಮೊತ್ತವೆಷ್ಟು? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಚಿ.ಟಿ. ದೇವೇಗೌಡ (ಸಹಕಾರ ಸಚಿವರು) :–

(ಅ) ರಾಜ್ಯ ಸರ್ಕಾರವು ದಿನಾಂಕ 16–04–2007 ಮತ್ತು 15–05–2007 ರ ಆದೇಶಗಳಂತೆ ಮಾಡಿರುವ ಅಸಲು ಮತ್ತು ಬಡ್ಡಿ ಮನ್ನಾ ಮೊತ್ತವು ಸುಮಾರು ರೂ. 2300/– ಕೋಟಿಯೆಂದು ಅಂದಾಜಿಸಲಾಗಿದೆ ಎಲ್ಲಾ ಜಿಲ್ಲೆಗಳಿಂದ ದೃಢೀಕೃತ ಬಿಲ್ಲುಗಳು ಬಂದ ನಂತರ ನಿಖರವಾದ ಮಾಹಿತಿಯು ಲಭ್ಯವಾಗುತ್ತದೆ.

(ಆ) ಕೃಷಿ ಪತ್ತಿನ ವ್ಯವಸ್ಥೆಯಲ್ಲಿರುವ ಸಹಕಾರ ಸಂಘಗಳು / ಬ್ಯಾಂಕುಗಳು ದಿ: 1–01–2006 ರಿಂದ 31–12–2006 ರ ಅವಧಿಯಲ್ಲಿ ರೈತರಿಗೆ ನೀಡಿರುವ ರೂ. 25,000/– ದವರೆಗಿನ ಅಲ್ಪಾವಧಿ ಬೆಳೆಸಾಲವನ್ನು ಬಡ್ಡಿ ಸಹಿತ ಸರ್ಕಾರವು ಮನ್ನಾ ಮಾಡಿರುತ್ತದೆ ಹಾಗೂ ರೂ. 25,000/– ಗಳಿಗೆ ಮೇಲ್ಪಟ್ಟು ಸಾಲ ಪಡೆದ ರೈತ ಸದಸ್ಯರು ರೂ. 25,000/– ಕ್ಕಿಂತ ಹೆಚ್ಚಿನ ಬೆಳೆ ಸಾಲದ ಅಸಲನ್ನು ದಿನಾಂಕ 31–05–2007 ರೊಳಗೆ ಸಂಬಂಧಪಟ್ಟ ಸಹಕಾರಿ ಸಂಸ್ಥೆಗಳಿಗೆ ಮರುಪಾವತಿಸಿದಲ್ಲಿ ರೂ. 25,000/– ಗಳ ಅಸಲು ಮತ್ತು ಮರುಪಾವತಿಸಿದ ದಿನಾಂಕದವರೆಗಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

(ಇ) ಸಾಲ ಬಡ್ಡಿ ಮನ್ನಾ ಬಾಬ್ತು ಸರ್ಕಾರವು 750.00 ಕೋಟಿ ರೂ.ಗಳನ್ನು ಈಗಾಗಲೇ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ನೀಡಿದ್ದು, ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಾದರ್ಲಿ ಹಂಪನಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 465ರ ಅನುಬಂಧ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಹೆಸರು	ರೂ. 750 ಕೋಟಿಗಳ ಅನುದಾನದಲ್ಲಿ ಹಂಚಿಕೆ ಮಾಡಿ ಬಿಡುಗಡೆ ಮಾಡಿರುವ ಮೊತ್ತ
1	ಬೆಂಗಳೂರು	2505.87
2	ಕೋಲಾರ	155.28
3	ಚಿತ್ರದುರ್ಗ	1177.23
4	ಶಿವಮೊಗ್ಗ	4468.92
5	ದಾವಣಗೆರೆ	5026.92
6	ತುಮಕೂರು	2513.70
7	ಮೈಸೂರು	2167.41
8	ಮಂಡ್ಯ	4164.89
9	ಹಾಸನ	2713.28
10	ದಕ್ಷಿಣ ಕನ್ನಡ	2001.83
11	ಕೊಡಗು	1228.13
12	ಚಿಕ್ಕಮಗಳೂರು	737.31
13	ಬೆಳಗಾವಿ	11222.51
14	ಬಿಜಾಪುರ	7734.88
15	ಬಾಗಲಕೋಟೆ	6386.37
16	ಧಾರವಾಡ	3714.62
17	ಕೆನರಾ ಸಿರ್ಸಿ	2845.32
18	ಗುಲ್ಬರ್ಗಾ	2415.06
19	ಬೀದರ್	5655.75
20	ರಾಯಚೂರು	3228.72
21	ಬಳ್ಳಾರಿ	1936.00
22	ವಾಣಿಜ್ಯ ಬ್ಯಾಂಕುಗಳಿಗೆ ಅಭ್ಯರ್ಪಿಸಲ್ಪಟ್ಟಿರುವ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ	1000.00
	ಒಟ್ಟು	**75000.00**
		ರೂ. 750.00 ಕೋಟಿಗಳು